# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು

**ಸಿ.ಸಿ 7026–2022** **ಸಿ. ಡಬ್ಲ್ಯೂಃ 15**

**ಪಿ. ಡಬ್ಲ್ಯೂಃ 06**

| | |
|---|---|
| ಸಾಕ್ಷಿದಾರರ ಹೆಸರು<br>ತಂದೆಯ / ಗಂಡನ ಹೆಸರು<br>ವಯಸ್ಸು<br>ಕೆಲಸ<br>ವಾಸ | ವಿಜಯರಾಜ್<br>ರಾಜಶೇಖರ<br>47 ವರ್ಷ<br>ಪೋಲೀಸ್ ಉಪ ನಿರೀಕ್ಷಕರು ಸಾಲಿಗ್ರಾಮ<br>ಸಾಲಿಗ್ರಾಮ |
| | **ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ** 17–06–2026. |

**ಮುಖ್ಯ ವಿಚಾರಣೆಃ ಶ್ರೀ ಎಪಿಪಿ ವಕೀಲರಿಂದಃ**

ನಾನು ದಿಃ 2021 ಜೂನ್ ಮಾಹೆಯಿಂದ ರಿಂದ ದಿಃ 2022 ನವಂಬರ್ ರವರೆಗೆ ನಂಜನಗೂಡು ಪಟ್ಟಣದ ಪೋಲೀಸ್ ಉಪ ನೀರಿಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ನಾನು ಈ ಪ್ರಕಣದ ಕಡತವನ್ನು ಚಾಸಾ–13 ರವರಿಂದ ಕಡತವನ್ನು ಪಡೆದುಕೊಂಡು ತನಿಖೆಯನ್ನು ಮುಂದುವರೆಸಿ ದಿಃ 18–05–2022 ರಂದು ಕೃತ್ಯ ನಡೆದ ಸಾರ್ವಜನಿಕ ಆಸ್ಪತ್ರೆಯಲ್ಲಿ ಕರ್ತವ್ಯ ನಿರತ ವೈದ್ಯಾಧಿಕಾರಿಗಳು ಚಾಸಾ–4, 5, 7, 9 ಮತ್ತು 10 ರವರುಗಳು ಕೃತ್ಯ ನಡೆದ ದಿನಾಂಕದಂದು ಕರ್ತವ್ಯದಲ್ಲಿ ಹಾಜರಿದ್ದರೆಂದು ನೀಡಿದ ದೃಢೀಕೃತ ಪತ್ರಗಳನ್ನು ಸ್ವೀಕರಿಸಿ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಆರೋಪಿತರು ತಮ್ಮ ತಂದೆಯನ್ನು ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ದಾಖಲಿಸಿದ ವೈದ್ಯರು ಚಿಕಿತ್ಸೆ ನೀಡಿದ ಬಗ್ಗೆ

ದೃಢೀಕೃತ ದಾಖಲಾತಿಗಳನ್ನು ನೀಡಿರುತ್ತಾರೆ. ನಂತರ ಸದರಿ ದಿನಾಂಕದಂದು ಕರ್ತವ್ಯದಲ್ಲಿ ಇದ್ದ ಹಾಜರಾತಿ ಪಟ್ಟಿಯನ್ನು ಸ್ವೀಕರಿಸಿರುತ್ತೇನೆ.

ನಂತರ ಸದರಿ ಪ್ರಕರಣವನ್ನು ಕೂಲಂಕುಶವಾಗಿ ಪರಿಶೀಲನೆ ಮಾಡಲಾಗಿ ಮೇಲ್ನೋಟಕ್ಕೆ ಆರೋಪಿತರ ವಿರುದ್ಧ ಆರೋಪ ಸಾಬೀತು ಅದ ಕಾರಣ ಆರೋಪಿತರ ವಿರುದ್ಧ ಕಲಂ 341, 353, 504, 323, 504 ಸಹವಾಚಕ 34 ಐ ಪಿ ಸಿ ರೀತ್ಯಾ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿ ನಿವೇದಿಸಿಕೊಂಡಿರುತ್ತೇನೆ.

ಸಾಕ್ಷಿಯು ದೋಷಾರೋಪಣಾ ನೋಡಿ ಗುರುತಿಸಿದ್ದು ಅದನ್ನು ನಿಪಿ–3 ಎಂದು, ಸಾಕ್ಷಿ ಸಹಿಯನ್ನು ನಿಪಿ–3(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 18–06–2022 ದೃಢೀಕರಣ ಪತ್ರವನ್ನು ಸ್ವೀಕೃತಿ ಮಾಡಿರುತ್ತಾರೆ ಅದನ್ನು ನಿಪಿ–4 ಎಂದು, ಸಾಕ್ಷಿ ಸಹಿಯನ್ನು ನಿಪಿ–4(ಎ) ಎಂದು ಗುರುತಿಸಲಾಯಿತು.ಸಾಕ್ಷಿಯು ದಿಃ 18–06–2022 ರಂದು ಸ್ವೀಕೃತಿ ಮಾಡಿರುವ ಎರಡು ಕರ್ತವ್ಯ ದೃಢೀಕರಣ ಪತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–5 ಮತ್ತು 6 ಎಂದು, ಸಾಕ್ಷಿ ಸಹಿಯನ್ನು ನಿಪಿ–5(ಎ) ಮತ್ತು 6(ಎ)ಎಂದು ಗುರುತಿಸಲಾಯಿತು. ಸಾಕ್ಷಿಯು ಹಾಜರಾತಿ ಪಟ್ಟಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–7 ಎಂದು, ಸಾಕ್ಷಿ ಸಹಿಯನ್ನು ನಿಪಿ–7(ಎ)ಎಂದು ಗುರುತಿಸಲಾಯಿತು. ಸಾಕ್ಷಿಯು ಹೊರ ರೋಗಿಗಳ ಚೀಟಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–8 ಎಂದು, ಸಾಕ್ಷಿ ಸಹಿಯನ್ನು ನಿಪಿ–8(ಎ)ಎಂದು ಗುರುತಿಸಲಾಯಿತು. ಸಾಕ್ಷಿಯು ದಿಃ 18–05–2022 ರೋಗ ವಿವರ ಹಾಳೆ ಶಸ್ತ್ರ ಚಿಕಿತ್ಸೆಯ ದಾಖಲೆಗಳನ್ನು ಸ್ವೀಕರಿಸಿದ್ದು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ–9 ಎಂದು, ಸಾಕ್ಷಿ ಸಹಿಯನ್ನು ನಿಪಿ–9(ಎ)ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಹೆಚ್ ಎನ್ ಎಂ ವಕೀಲರಿಂದ</u>**

ನಿಪಿ–7 ರಲ್ಲಿ ಶಾಶ್ವತ ಮತ್ತು ತಾತ್ಕಾಲಿಕ ಸಿಬ್ಬಂದಿಗಳ ಬಗ್ಗೆ ಮಾಹಿತಿ ಇರುವುದಿಲ್ಲ ಎಂದರೆ ಸರಿ. ಸದರಿ ಪ್ರಕರಣ ಕೊರೋನ ಸಮಯದಲ್ಲಿ ಆಗಿರುತ್ತದೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂದಪಟ್ಟ ಸಂಪೂರ್ಣ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರಕರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**2 ನೇ ಕಿ.ಪ್ರ.ದ. ನ್ಯಾ ದಂ. ನಂಜನಗೂಡು**